ಭಾಗು ಒಬ್ಬ ಅಪರಾಧಿಯಂತೆ ಕೇಳಿದ, ‘ಆದ್ರೆ? ದೇವರ ದೇವ ಯೇಸು ಮಸೀಹ?...’

‘ನಡಿ ನಡಿ. ಗೊತ್ತಿದ್ದೂ ಬೆಂಕೀಲಿ ಕೈ ಹಾಕಿದ್ದೀಯಾ. ಅದರ ಶಿಕ್ಷೆ ಈಗ ನಾನ್ ಅನುಭವಿಸಲೇನು? ಇಷ್ಟು ರಾತ್ರಿ ಹೊತ್ತಿನಲ್ಲಿ ನಿನಗೆ ಸಹಾಯ ಮಾಡಕ್ಕಾಗಲ್ಲ.’

‘ಆದ್ರೆ ಪಾದ್ರಿ ಲೊಬೊ.’

‘ಹೋಗ್ ಹೋಗು. ಪಾದ್ರಿ ಲೊಬೊ ಏನಾದ್ರು ಮಾಡೋದಿದ್ರೆ ಚೆನ್ನಾಗಿತ್ತು.’

ಭಾಗು ತಲೆ ಬಗ್ಗಿಸಿಕೊಂಡು ಅಲ್ಲಿಂದ ಹೊರಟು ಹೋದ. ಅರ್ಧಗಂಟೆಯ ನಂತರ, ನನ್ನ ಕೋಪ ಕಡಿಮೆಯಾಗಿ ನನ್ನ ವರ್ತನೆಯ ಬಗ್ಗೆ ನಾಚಿಕೆಯಾಗಿ ನನಗೆ ತಪ್ಪಿತಸ್ಥ ಭಾವನೆ ಬಂತು. ಯಾವಾಗಲೂ ಶಾಂತವಾಗಿರುತ್ತಿದ್ದ ನನ್ನ ಮನಸ್ಸು ಎಲ್ಲಿ ಹೋಗಿತ್ತು? ನನ್ನ ತಪ್ಪಿಗೆ ಸರಿಯಾದ ಶಿಕ್ಷೆ ಏನೆಂದರೆ, ನಾನು ನನ್ನ ದೊಡ್ಡಸ್ತಿಕೆ ಮತ್ತು ಸ್ವಾರ್ಥವನ್ನು ಮರೆತು ಭಾಗುವಿನ ಮುಂದೆ ನನ್ನ ತಪ್ಪನ್ನು ಒಪ್ಪಿಕೊಂಡು ಕ್ಷಮೆ ಕೇಳಿ, ಅವನ ಹೆಂಡತಿಗೆ ಮನಃಪೂರ್ವಕವಾಗಿ ಚಿಕಿತ್ಸೆ ನೀಡಬೇಕು ಎಂದುಕೊಂಡು, ಲಗುಬಗೆಯಿಂದ ಬಟ್ಟೆ ತೊಟ್ಟು ಭಾಗುವಿನ ಮನೆಗೆ ಓಡಿದೆ. ಅಲ್ಲಿಗೆ ತಲುಪಿದಾಗ, ಭಾಗುವಿನ ಸಹೋದರರು ತಮ್ಮ ಅತ್ತಿಗೆಯನ್ನು ಚಾಪೆಯ ಮೇಲೆ ಹಾಕಿ ಹೊರಗೆ ಎಳೆದು ತರುತ್ತಿದ್ದರು... ನಾನು ಭಾಗುವನ್ನು ಕೇಳಿದೆ, ‘ಇವಳನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೀರಿ?’ ಭಾಗು ಚಡಪಡಿಕೆಯ ಧ್ವನಿಯಲ್ಲಿ ಹೇಳಿದ, ‘ಕೋಂಟೀನ್‌ಗೆ’.

